**ಕರ್ನಾಟಕ ಸರ್ಕಾರ**
**ರೇಷ್ಮೆ ಇಲಾಖೆ**

ಸಂ:ಯೋ:ಪಿಎಸ್5:ಸಸ:45:2016-17

**ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು**
**ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ,**
**ಬೆಂಗಳೂರು ದಿನಾಂಕ:21-07-2016.**

# ಸುತ್ತೋಲೆ

ವಿಷಯ: ಹಿಪ್ಪುನೇರಳೆ ತೋಟ ನಿರ್ವಹಣೆ ಮತ್ತು ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಅಗತ್ಯವಿರುವ ಪರಿಕರಗಳು, ಸಲಕರಣೆಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂವರ್ಧಕಗಳು ಮತ್ತು ರೇಷ್ಮೆ ಬೆಳೆಗಳ ಸಂರಕ್ಷಣೆಗೆ ಅಗತ್ಯವಿರುವ ಸೋಂಕುನಿವಾರಕ ಹಾಗು ರೀಲಿಂಗ್ ಉಪಕರಣ / ಯಂತ್ರೋಪಕರಣ ಇತ್ಯಾದಿಗಳ ಸರಬರಾಜಿಗೆ ಮಾರ್ಗಸೂಚಿ

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ:ತೋಇ:793:ತೋಇವಿ:214 ದಿನಾಂಕ:17-01-2015

2. ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ ಬೆಂಗಳೂರು ಇವರ ಸುತ್ತೋಲೆ ಗಳ ಸಂಖ್ಯೆ:ಸಾಗೋವಿ:ದಕ:ಇ-ಟಿ:2016-17 ದಿನಾಂಕ:27-05-2016, ಸಂಖ್ಯೆ: ಸಸಂವಿ: ತಾಂ-1: ಪೀದಪ: 2015-16 ದಿನಾಂಕ:20-11-2015 ಮತ್ತು ಸಂಖ್ಯೆ:ಸಸಂವಿ:ತಾಂ-1:ಸಸಂಉ:ದಪ:2014-15 ದಿನಾಂಕ:20-11-2015

3. ರೇಷ್ಮೆ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ ಯೋ:ಪಿಎಸ್5:ರೇಅಯೋ:ವಾಯೋ:24:2016-17 ಮತ್ತು ಸಂಖ್ಯೆ:ಯೋ:ಪಿಎಸ್6:ರೇಭಾಸಯೋ:27:2016-17 ದಿನಾಂಕ:03-06-2016

-----

ರೇಷ್ಮೆ ಇಲಾಖೆಯು ವಿವಿಧ ಯೋಜನೆಗಳ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಹಿಪ್ಪುನೇರಳೆ ಕೃಷಿ ಮತ್ತು ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಬಳಸುವ ಅಗತ್ಯ ಪರಿಕರಗಳು, ಹನಿ ನೀರಾವರಿ, ಉಪಕರಣ / ಯಂತ್ರೋಪಕರಣ, ಸಲಕರಣೆಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂವರ್ಧಕ, ಬೇರು ಕೊಳೆ ನಿಯಂತ್ರಕ ಮತ್ತು ರೇಷ್ಮೆ ಬೆಳೆಗಳ ಸಂರಕ್ಷಣೆಗೆ ಅಗತ್ಯವಿರುವ ಸೋಂಕುನಿವಾರಕ, ಚಂದ್ರಿಕೆ / ಮೌಂಟೇಜಸ್, ಗೂಡಿನ ಗುಣಮಟ್ಟ ಮತ್ತು ಇಳುವರಿ ಹೆಚ್ಚಿಸಲು ಹುಳು ಹಣ್ಣಾಗುವಾಗ ಬಳಸುವ ಜೂವೈನಲ್ ಹಾರ್ಮೋನ್, ರೀಲಿಂಗ್ ಉಪಕರಣ / ಯಂತ್ರೋಪಕರಣ, ಇತ್ಯಾದಿಗಳ ಸರಬರಾಜು ಕುರಿತು ಇಲಾಖೆಯಲ್ಲಿ ವಿವಿಧ ಯೋಜನೆಗಳಡಿ ರೇಷ್ಮೆ ಬೆಳೆಗಾರರಿಗೆ / ರೀಲರುಗಳಿಗೆ ಸಹಾಯಧನ ನೀಡಲಾಗುತ್ತಿದೆ. ಸಹಾಯಧನ ಪ್ರತಿಶತ ಮೊತ್ತದ ವಿವರಗಳು ಆಯಾ ಯೋಜನೆ / ಕಾರ್ಯಕ್ರಮಗಳಲ್ಲಿ ಪ್ರತ್ಯೇಕವಾಗಿ ನಿಗದಿಪಡಿಸಲಾಗಿದೆ.

ಯಾವುದೇ ಸಾಮಗ್ರಿ, ಉಪಕರಣ ಅಥವಾ ಸೇವೆಗಳನ್ನು ಇಲಾಖೆ ನೇರವಾಗಿ ಸಂಗ್ರಹಣೆ ಮಾಡಿ ಫಲಾನುಭವಿಗಳಿಗೆ ಒದಗಿಸುವಂತಿಲ್ಲ. ಬದಲಿಗೆ ಫಲಾನುಭವಿಗಳೇ ಖರೀದಿಸಿ ಸಂಬಂಧಿತ ಯೋಜನೆಗಳಡಿ

ಇಲಾಖೆಗಳಿಂದ ಸಹಾಯಧನ ಪಡೆಯುತ್ತಿರುತ್ತಾರೆ ಎಂದು ಸರ್ಕಾರದ ಉಲ್ಲೇಖ(1)ರ ಸುತ್ತೋಲೆಯಲ್ಲಿ ನಿರ್ದೇಶಿಸಲಾಗಿದೆ. ಈ ಸಂಬಂಧ ದರ ನಿಗದಿಪಡಿಸುವ ಕ್ರಮದ ಕುರಿತು ಮಾರ್ಗದರ್ಶನ ನೀಡಲಾಗಿದೆ. ಮುಂದುವರೆದು ಸರ್ಕಾರದ ಉಲ್ಲೇಖ(1)ರ ಸುತ್ತೋಲೆ ಅನುಸರಿಸಿ KTPP ನಿಯಮಗಳನ್ನು ಅನುಸರಿಸಿ ಅರ್ಹ ಸಂಸ್ಥೆಗಳನ್ನು ಕಾಲಕಾಲಕ್ಕೆ ಎಂಪ್ಯಾನಲ್ ಮಾಡಲು ಪ್ರತ್ಯೇಕ ಕ್ರಮವಹಿಸಲಾಗಿರುತ್ತದೆ.

ಕೃಷಿ ಇಲಾಖೆ ಉಲ್ಲೇಖ(2)ರ ಸುತ್ತೋಲೆಗಳಲ್ಲಿ ಪರಿಕರಗಳು, ಸಾಮಗ್ರಿ, ಸಲಕರಣೆ ಇತ್ಯಾದಿಗಳ ಫಲಾನುಭವಿ ಸರಬರಾಜು ಕುರಿತಾಗಿ ಜಾರಿ ಮಾಡಿರುವ ಮಾರ್ಗಸೂಚಿ ವಿವರಗಳನ್ನು ಅನುಸರಿಸಿ ರೇಷ್ಮೆ ಕೃಷಿ ಪರಿಕರಗಳು ಸಾಮಗ್ರಿ, ಸಲಕರಣೆ ಮತ್ತು ಸೋಂಕು ನಿವಾರಕ ಇತ್ಯಾದಿಗಳ ಫಲಾನುಭವಿ ಸರಬರಾಜು ಕುರಿತು ಈ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದೆ. ಈ ಮಾರ್ಗಸೂಚಿಗಳು ಈ ಕೂಡಲೇ ಜಾರಿಯಲ್ಲಿ ಬರುತ್ತವೆ. ಅದರಂತೆ ಈ ಹಿಂದೆ ರೇಷ್ಮೆ ಕೃಷಿ ಪರಿಕರಗಳು, ಸಲಕರಣೆಗಳು, ಜೈವಿಕ ಗೊಬ್ಬರಗಳು, ಸಸ್ಯಸಂವರ್ಧಕಗಳು, ಸೋಂಕುನಿವಾರಕ, ರೀಲಿಂಗ್ ಯಂತ್ರೋಪಕರಣಗಳು ಇತ್ಯಾದಿಗಳ ಫಲಾನುಭವಿ ಯೋಜನೆಗಳ ಕುರಿತಾಗಿ ಹೊರಡಿಸಲಾಗಿರುವ ನಿರ್ದೇಶನ / ಮಾರ್ಗಸೂಚಿಗಳನ್ನು ಈ ತಕ್ಷಣದಿಂದ ಹಿಂದೆ ಪಡೆಯಲಾಗಿದೆ.

**ಇಲಾಖಾ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳು-** ರೇಷ್ಮೆ ಬೆಳೆಗಾರರ ಬೇಡಿಕೆಗೆ ಅನುಗುಣವಾಗಿ ಬೇಡಿಕೆ ಪತ್ರವನ್ನು ಮೇಲಿನಂತೆ ಬೇಡಿಕೆ ಸಲ್ಲಿಸುವಾಗ ಎಂಪ್ಯಾನಲ್ ಮಾಡಲಾದ ಸರಬರಾಜುದಾರರು ದರಪಟ್ಟಿಯಲ್ಲಿರುವ ಸಲಕರಣೆ, ಸಾಮಗ್ರಿ ಮತ್ತು ಸೋಂಕುನಿವಾರಕಗಳನ್ನು ತಾಂತ್ರಿಕ ಸೇವಾ ಕೇಂದ್ರದ ಮೂಲಕ ರೇಷ್ಮೆ ಬೆಳೆಗಾರರಿಗೆ ವಿತರಿಸಬೇಕಾಗಿರುವುದರಿಂದ

## I. ಬೇಡಿಕೆ ಸಿದ್ದಪಡಿಸಿ ದಾಸ್ತಾನು ಪಡೆಯುವುದು ಮತ್ತು ಪರಿಶೀಲನೆ

1. ಹವಾಮಾನ / ಋತುಮಾನಕ್ಕೆ ಅನುಗುಣವಾಗಿ ಯಶಸ್ವಿ ರೇಷ್ಮೆ ಬೆಳೆಗಳ ಹಿತದೃಷ್ಟಿಯಿಂದ ರೈತರ ಅಗತ್ಯತೆಗಳನ್ನು ವಿಮರ್ಶಿಸಿ ಅವಶ್ಯವಿರುವ ಪ್ರಮಾಣೀಕೃತ ಗುಣಮಟ್ಟದ ಪರಿಕರಗಳು, ಸಲಕರಣೆಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂವರ್ಧಕಗಳು, ಬೇರುಕೊಳೆ ನಿಯಂತ್ರಕ ಮತ್ತು ರೇಷ್ಮೆ ಬೆಳೆ ಸಂರಕ್ಷಣೆ ಸೋಂಕುನಿವಾರಕ, ಹುಳು ಹಣ್ಣಾಗುವಾಗ ಬಳಸುವ ಜೂವೈನಲ್ ಹಾರ್ಮೋನ್, ಇತ್ಯಾದಿಗಳ ಪ್ರಮಾಣವನ್ನು ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರು ಅವರ ವ್ಯಾಪ್ತಿಯ ರೇಷ್ಮೆ ಉಪನಿರ್ದೇಶಕರು, ರೇಷ್ಮೆ ಸಹಾಯಕ ನಿರ್ದೇಶಕರು ಮತ್ತು ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳ ಜೊತೆ ಕಾಲಕಾಲಕ್ಕೆ ಸಮಾಲೋಚಿಸಿ ಅವಶ್ಯವಿರುವ ಪರಿಕರ, ಸಲಕರಣೆ, ಉಪಕರಣ / ಯಂತ್ರೋಪಕರಣ ಮತ್ತು ಸೋಂಕುನಿವಾರಕಗಳ ಪರಿಮಾಣವನ್ನು ನಿರ್ಧರಿಸುವುದು.
2. ಜಿಲ್ಲಾ ರೇಷ್ಮೆ ಉಪ ನಿರ್ದೇಶಕರು / ರೇಷ್ಮೆ ಸಹಾಯಕ ನಿರ್ದೇಶಕರು ರೇಷ್ಮೆ ಬೆಳೆಗಾರರ ಬೇಡಿಕೆ ಆಧರಿಸಿ ವಿವಿಧ ಪರಿಕರ, ಸಲಕರಣೆ, ಸೋಂಕುನಿವಾರಕ ಉಪಕರಣ / ಯಂತ್ರೋಪಕರಣ ಮತ್ತು ಸಾಮಗ್ರಿಗಳ ಪೂರೈಕೆ/ಸರಬರಾಜು ವಿವರಗಳನ್ನು ಅವಶ್ಯ ಪ್ರಮಾಣಕ್ಕೆ ಅನುಗುಣವಾಗಿ ತಾಂತ್ರಿಕ ಸೇವಾ ಕೇಂದ್ರವಾರು ಸಿದ್ದಪಡಿಸಿ ಕಾಲಬದ್ಧ ವೇಳಾಪಟ್ಟಿ ಸೂಚಿಸಿ ಆಯಾ ತಾಂತ್ರಿಕ ಸೇವಾ ಕೇಂದ್ರಗಳ ಫಲಾನುಭವಿಗಳ ಸರಬರಾಜಿಗಾಗಿ ಸರಬರಾಜು ಮಾಡಿ ದಾಸ್ತಾನು ಮಾಡಲು ಎಂಪ್ಯಾನಲ್ ಮಾಡಿರುವ ಅರ್ಹ ಸಂಸ್ಥೆಗಳಿಗೆ ಕ್ರೋಢೀಕರಿಸಿ ಬೇಡಿಕೆ ಪತ್ರವನ್ನು ಸಲ್ಲಿಸುವುದು.
3. ಗುರುತಿಸಲಾದ ತಾಂತ್ರಿಕ ಸೇವಾ ಕೇಂದ್ರಗಳ ಪೂರ್ಣ ವಿಳಾಸ, ನಿಯಂತ್ರಣ/ ಅನುಷ್ಠಾನಾಧಿಕಾರಿ, ಅವರ ದೂರವಾಣಿ ಸಂಖ್ಯೆ ಮುಂತಾದ ಎಲ್ಲಾ ವಿವರಗಳನ್ನು ಸರಬರಾಜು ಸಂಸ್ಥೆಗೆ ಬೇಡಿಕೆ ಪತ್ರದಲ್ಲಿ ಸೂಕ್ತವಾಗಿ ತಿಳಿಸುವುದು.

4. ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು ಎಂಪ್ಯಾನಲ್ ಆಗಿರುವ ಸಂಸ್ಥೆವಾರು ದಾಸ್ತಾನು ಮಾಡಿರುವ ಪರಿಕರ / ಉಪಕರಣಗಳ ಕುರಿತಾದ ವರದಿಯನ್ನು ಕಾಲಕಾಲಕ್ಕೆ ರೇಷ್ಮೆ ಉಪನಿರ್ದೇಶಕರು / ರೇಷ್ಮೆ ಸಹಾಯಕ ನಿರ್ದೇಶಕರಿಗೆ ಒಪ್ಪಿಸುವುದು.
5. ತಾಂತ್ರಿಕ ಸೇವಾ ಕೇಂದ್ರಗಳಿಗೆ ಸರಬರಾಜದ ಪರಿಕರ / ಉಪಕರಣಗಳನ್ನು ಸೂಚಿಸಲಾದ ಸಂಸ್ಥೆಯು ದಾಸ್ತಾನು ಮಾಡಿರುವ ವಿವರಗಳನ್ನು ರೇಷ್ಮೆ ಉಪನಿರ್ದೇಶಕರು / ರೇಷ್ಮೆ ಸಹಾಯಕ ನಿರ್ದೇಶಕರು ಸೂಕ್ತ ಸಮಯದಲ್ಲಿ ಪರಿಶೀಲಿಸಿ ಧೃಢೀಕರಿಸಬೇಕು.
6. ಸರಬರಾಜು ಮಾಡುವ ಸಲಕರಣೆ ಸಾಮಗ್ರಿ ಮತ್ತು ಸೋಂಕುನಿವಾರಕಗಳ ಪ್ಯಾಕಿಂಗ್ ಮೇಲೆ **"ಕರ್ನಾಟಕ ಸರ್ಕಾರದ ರೇಷ್ಮೆ ಇಲಾಖೆಯ ಸಹಾಯಧನ ಯೋಜನೆಯಡಿ ವಿತರಣೆಗೆ ಮಾತ್ರ ಮರು ಮಾರಾಟಕ್ಕಲ್ಲ"** ಎಂದು ಮುದ್ರಿಸಿರಬೇಕು.

**II. <u>ಫಲಾನುಭವಿ ಸರಬರಾಜು ಮತ್ತು ಪರಿಶೀಲನೆ</u>**

7. ಎಂಪ್ಯಾನಲ್ ಮಾಡಿದ ಸರಬರಾಜುದಾರರಿಗೆ ನಿಗದಿಪಡಿಸಿರುವ ಮಾರಾಟ ದರ ಹಾಗೂ ಗರಿಷ್ಟ ಸಹಾಯಧನ ಮತ್ತು ರೇಷ್ಮೆ ಬೆಳೆಗಾರರ ವಂತಿಗೆ ಪಟ್ಟಿಯ ವಿವರಗಳನ್ನು ತಾಂತ್ರಿಕ ಸೇವಾ ಕೇಂದ್ರದಲ್ಲಿ ಕಡ್ಡಾಯವಾಗಿ ಪ್ರದರ್ಶಿಸುವುದು.
8. ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು / ಅನುಷ್ಠಾನಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ರೇಷ್ಮೆ ಬೆಳೆಗಾರರ ಅವಶ್ಯಕತೆ ಅನುಗುಣವಾಗಿ ಯಾವ ಯಾವ ಪರಿಕರ, ಸಲಕರಣೆ, ಸಾಮಗ್ರಿ, ಯಂತ್ರೋಪಕರಣಗಳು ಮತ್ತು ಸೋಂಕುನಿವಾರಕ ಇತ್ಯಾದಿಗಳನ್ನು ಸರಬರಾಜು ಮಾಡಲು ಅನುಕೂಲಕರವಾಗಿ ಪ್ರತ್ಯೇಕ ಪಟ್ಟಿಗಳನ್ನು ಸಂಸ್ಥೆವಾರು /ಐಟಂವಾರು ಸಿದ್ದಪಡಿಸಿ ಆಯಾ ಸರಬರಾಜುದಾರ ಸಂಸ್ಥೆಗೆ ನೀಡುವುದು.
9. ಇಂತಹ ಪಟ್ಟಿಯಲ್ಲಿ ಯೋಜನೆಯ ಹೆಸರು, ಫಲಾನುಭವಿಯ ಹೆಸರು, ಸಲಕರಣೆ/ಸಾಮಗ್ರಿ ಹೆಸರು, ನಿಗದಿಪಡಿಸಿರುವ ಎಲ್1 ದರ, ಫಲಾನುಭವಿ ವಂತಿಕೆ ಮತ್ತು ಅರ್ಹವಿರುವ ಸಹಾಯಧನ ಹಾಗು ಸರಬರಾಜು ಅವಧಿಯ ವಿವರಗಳು ಒಳಗೊಂಡಿರಬೇಕು.
10. ವಿವಿಧ ಯೋಜನೆಗಳ / ಕಾರ್ಯಕ್ರಮಗಳ ಮಾರ್ಗಸೂಚಿಗಳ ಅನುಸಾರ **ಫಲಾನುಭವಿ ವಂತಿಗೆ ಪಡೆದು** ಅರ್ಹ ಫಲಾನುಭವಿಗಳಿಗೆ ಪರಿಕರ ಇತ್ಯಾದಿ ಸರಬರಾಜು ಮಾಡುವುದು.
11. ಸಂಬಂದಪಟ್ಟ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು / ಅನುಷ್ಠಾನಾಧಿಕಾರಿಗಳು ಫಲಾನುಭವಿಗಳ ಪಟ್ಟಿಯ ಅನುಸಾರ ಪರಿಕರ, ಸಲಕರಣೆ, ಸಾಮಗ್ರಿ ಮುಂತಾದುವುಗಳು ಸೂಚಿಸಲಾದ ಕ್ಲುಪ್ತ ಕಾಲದಲ್ಲಿ ವಿತರಣೆಯಾಗಿರುವ ಕುರಿತು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು.
12. ಈ ಕುರಿತಾಗಿ ಸಂಬಂದಿಸಿದ ರೇಷ್ಮೆ ಸಹಾಯಕ ನಿರ್ದೇಶಕರು ಪರಿಶೀಲನಾ ಉಸ್ತುವಾರಿ ನಿರ್ವಹಿಸಬೇಕು ಹಾಗು ಸೂಕ್ತ ವರದಿಗಳನ್ನು ರೇಷ್ಮೆ ಉಪನಿರ್ದೇಶಕರಿಗೆ ಒಪ್ಪಿಸಬೇಕು.
13. ರೇಷ್ಮೆ ಬೆಳೆಗಾರರು ಅವರ ಆಯ್ಕೆ ಮತ್ತು ಅಗತ್ಯತೆ ಅನುಸಾರ ರೇಷ್ಮೆ ಕೃಷಿ ಪರಿಕರಗಳ ಸರಬರಾಜು ಪಡೆಯಲು ಸ್ವತಂತ್ರರಾಗಿರುತ್ತಾರೆ.

14. ಇಂತಹದೇ ಪರಿಕರಗಳು, ಸಲಕರಣೆಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂವರ್ಧಕಗಳು ಮತ್ತು ರೇಷ್ಮೆ ಬೆಳೆಗಳ ಸಂರಕ್ಷಣೆಗೆ ಅಗತ್ಯವಿರುವ ಸೋಂಕುನಿವಾರಕ ಇತ್ಯಾದಿಗಳನ್ನು ಸರಬರಾಜು ಪಡೆಯುವಂತೆ ಒತ್ತಾಯ ಮಾಡುವಂತಿಲ್ಲ.

## III. ಗುಣಮಟ್ಟ

15. ಸರಬರಾಜು ಮಾಡುವ ಸಂಧರ್ಭದಲ್ಲಿ ವಿವಿಧ ಸಲಕರಣೆ ಸಾಮಗ್ರಿ ಮತ್ತು ಸೋಂಕುನಿವಾರಕ ಇತ್ಯಾದಿ ಯಾವುದೇ ಹಾನಿಗೊಳಗಾಗಿದ್ದಲ್ಲಿ ಕೂಡಲೇ ಅವುಗಳನ್ನು ಬದಲಾಯಿಸಿ ಕೊಡುವುದು. ಬೇಡಿಕೆ ನೀಡುವ ಪ್ರಾಧಿಕಾರಿಗಳು ತಿಳಿಸಿದ ಅವಧಿಯೊಳಗಾಗಿ ಸಲಕರಣೆ ಸಾಮಗ್ರಿಗಳನ್ನು ಮತ್ತು ಸೋಂಕುನಿವಾರಕ, ಇತ್ಯಾದಿಗಳನ್ನು ಪೂರ್ಣ ಪ್ರಮಾಣದಲ್ಲಿ ಕಡ್ಡಾಯವಾಗಿ ಸರಬರಾಜು ಮಾಡುವುದು. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಎಂಪ್ಯಾನಲ್ ಷರತ್ತು ಮತ್ತು ನಿಭಂದನೆಗಳ ಅನ್ವಯ ಕ್ರಮ ಜರುಗಿಸಲು ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವುದು.
16. ರೇಷ್ಮೆ ಬೆಳೆಗಾರರಿಗೆ ಪೂರೈಸಲಾಗುವ ಎಲ್ಲಾ ಸಲಕರಣೆ ಸಾಮಗ್ರಿಗಳ ಮತ್ತು ಸೋಂಕುನಿವಾರಕಗಳ ರ್‍ಯಾಂಡಮ್ ಮಾದರಿಗಳನ್ನು ನಿಯಮಿತವಾಗಿ ಸೂಕ್ತ ರೀತಿಯಲ್ಲಿ ಸಂಗ್ರಹಿಸಿ ನಿಗದಿತ ಸಂಶೋಧನಾ ಸಂಸ್ಥೆಗಳಿಗೆ ರವಾನಿಸಿ ಪರೀಕ್ಷೆಗೆ ಒಳಪಡಿಸಿ ಗುಣಮಟ್ಟ ಕುರಿತು ಖಾತರಿಪಡಿಸಿಕೊಂಡ ನಂತರದಲ್ಲಿ ಮಾತ್ರ ಸರಬರಾಜು ಸಂಸ್ಥೆಯವರಿಗೆ ಅನುದಾನ ಲಭ್ಯತೆ ಅನುಸರಿಸಿ ಹಣ ಸಂದಾಯ ಮಾಡುವುದು ನಿಗದಿತ ಗುಣಮಟ್ಟ ಇಲ್ಲದೇ ಕಳಪೆ ಇದ್ದಲ್ಲಿ ಹಿಂತಿರುಗಿಸಿ ಗುಣಮಟ್ಟದ ಸಾಮಾಗ್ರಿ ಪಡೆಯುವುದು.

## IV. ಎಂಪ್ಯಾನಲ್ ಆದ ಸಂಸ್ಥೆಗಳು ಅನುಸರಿಸಬೇಕಾದ ಕ್ರಮಗಳು

17. ಜಿಲ್ಲಾ ರೇಷ್ಮೆ ಉಪನಿರ್ದೇಶಕರು, ರೇಷ್ಮೆ ಸಹಾಯಕ ನಿರ್ದೇಶಕರು ಬೇಡಿಕೆ ಸಲ್ಲಿಸುವ ಪ್ರಮಾಣಕ್ಕೆ ಅನುಗುಣವಾಗಿ ಪ್ರಮಾಣೀಕೃತ ಗುಣಮಟ್ಟದ ಸಲಕರಣೆ ಸಾಮಗ್ರಿ ಮತ್ತು ಸೋಂಕುನಿವಾರಕ ಇತ್ಯಾದಿಗಳನ್ನು ಸೂಚಿಸಲಾದ ವೇಳಾಪಟ್ಟಿಯಂತೆ ಸರಬರಾಜು ಮಾಡಿ ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ದಾಸ್ತಾನು ಮಾಡಬೇಕು.
18. ಪ್ರಮಾಣೀಕೃತ ಅನುಮೋದಿತ ಗುಣಮಟ್ಟದ ಪರಿಕರ, ಸಲಕರಣೆ ಸಾಮಗ್ರಿ ಮತ್ತು ಸೋಂಕುನಿವಾರಕಗಳನ್ನು ಸಹಾಯಧನದ ಕಾರ್ಯಕ್ರಮಗಳ ಮಾನದಂಡಗಳಂತೆ ಆಯ್ಕೆ ಮಾಡಿ ಸೂಚಿಸಲಾಗಿರುವ ಫಲಾನುಭವಿಗಳಿಗೆ ಫಲಾನುಭವಿ ವಂತಿಗೆ ಪಾವತಿಸಿದಲ್ಲಿ ಮಾತ್ರ ಸರಬರಾಜು ಮಾಡುವುದು.
19. ಅರ್ಹವಿರುವ ಸಹಾಯಧನ ಮೊತ್ತ ಪಾವತಿಗಾಗಿ ಫಲಾನುಭವಿ ವಂತಿಗೆ ಪಾವತಿಸಿ ಸರಬರಾಜು ಪಡೆದುಕೊಂಡಿರುವ ರೇಷ್ಮೆ ಬೆಳೆಗಾರರ ವಿವರಗಳನ್ನು ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಪ್ರತಿ 15 ದಿನಗಳಿಗೆ ಒಮ್ಮೆ ನಿಗದಿತ ನಮೂನೆಯಲ್ಲಿ ಒದಗಿಸಿ ಮಂಜೂರಾತಿ ನೀಡಲು ಬಿಲ್ಲುಗಳನ್ನು ತಯಾರಿಸಿ ಸಂಬಂಧಿತ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳಿಗೆ ಕೋರಿಕೆ ಪತ್ರ ಸಲ್ಲಿಸುವುದು.
20. ಕೇವಲ ಎಂಪ್ಯಾನಲ್ ಆಗಿರುವ ಸಂಸ್ಥೆಗಳ ಬಿಲ್ಲುಗಳನ್ನು ಮಾತ್ರ ಪರಿಗಣಿಸುವುದರಿಂದ ಅರ್ಹ ಸಂಸ್ಥೆಯ ಹೆಸರಿನ ಬಿಲ್ಲುಗಳನ್ನು ಮಾತ್ರ ನೀಡಬೇಕು. ಇತರೆ ಯಾವುದೇ ಸಂಸ್ಥೆಯ ಬಿಲ್ಲುಗಳನ್ನು ನೀಡಿದಲ್ಲಿ ಪರಿಗಣಿಸಲಾಗುವುದಿಲ್ಲ.

21. ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ನೀಡುವ ಬಿಲ್ಲಿನಲ್ಲಿ ಯೋಜನೆ ಹೆಸರು, ಪರಿಕರ, ಸಲಕರಣೆ, ಸಾಮಗ್ರಿ ಮತ್ತು ಸೋಂಕುನಿವಾರಕಗಳ ಪೂರ್ಣ ವಿವರ, ಸರಬರಾಜು ಮಾಡಿದ ದಿನಾಂಕ, ಪ್ರಮಾಣ, ಈಗಾಗಲೇ ಪಾವತಿಸಿರುವ ಫಲಾನುಭವಿ ವಂತಿಗೆ ಹಾಗೂ ಸರ್ಕಾರದ ಸಹಾಯಧನದ ಮೊತ್ತದ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿ ಸಲ್ಲಿಸಬೇಕು.

## V. ಮಂಜೂರಾತಿ ಮತ್ತು ಬಿಲ್ಲು ಪಾವತಿ

### ಮಂಜೂರಾತಿ

ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು/ಅನುಷ್ಠಾನಾಧಿಕಾರಿಗಳು ಫಲಾನುಭವಿವಾರು ಸರಬರಾಜು ಮಾಡಿರುವ ಸಲಕರಣೆ / ಸಾಮಗ್ರಿ ವಿವರ ಪಡೆದಿರುವ ವಂತಿಗೆ ಮೊತ್ತದ ವಿವರಗಳನ್ನು, ದೃಡೀಕರಿಸಿ ಶಿಫಾರಸ್ಸಿನೊಂದಿಗೆ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಮಂಜೂರು ಮಾಡುವ ಸಂಬಂಧ ಸೂಕ್ತ ಪರಿಶೀಲನೆಯಿಂದ ಸಲ್ಲಿಸಬೇಕು.

### ಬಿಲ್ಲು ಪಾವತಿ

22. ಕೃಷಿ ಇಲಾಖೆಯಲ್ಲಿ ಸಹಾಯಧನ ಮೊತ್ತ ಬಿಡುಗಡೆ / ಪಾವತಿಗೆ ಅನುಸರಿಸುತ್ತಿರುವ ಮಾರ್ಗಸೂಚಿಗಳನ್ನು ಪಾಲಿಸುವುದು. ಎಂಪ್ಯಾನಲ್ ಮಾಡಿರುವ ಸಂಸ್ಥೆಗಳು ನೀಡುವ ಬಿಲ್ಲುಗಳನ್ನು ಮಾತ್ರ ಪರಿಗಣಿಸಬೇಕು ಇತರೆ ಯಾವುದೇ ಸಂಸ್ಥೆಯ ಬಿಲ್ಲುಗಳನ್ನು ಪರಿಗಣಿಸುವಂತಿಲ್ಲ.
23. ಬಿಲ್ಲಿನಲ್ಲಿ ಯೋಜನೆ ಹೆಸರು, ಸಲಕರಣೆ, ಸಾಮಗ್ರಿ ಮತ್ತು ಸೋಂಕುನಿವಾರಕ ಇತ್ಯಾದಿಗಳ ವಿವರ, ಫಲಾನುಭವಿಗೆ ಸರಬರಾಜು ಮಾಡಿದ ಪ್ರಮಾಣ ಹಾಗು ದಿನಾಂಕ, ಫಲಾನುಭವಿ ವಂತಿಗೆ ಹಾಗೂ ಸರ್ಕಾರದ ಸಹಾಯಧನ ವಂತಿಗೆ ವಿವರಗಳನ್ನು ಸೂಕ್ತ ಪರಿಶೀಲನೆಯಿಂದ ಕಡ್ಡಾಯವಾಗಿ ನಮೂದಿಸರಬೇಕು. ಈ ಕುರಿತು ಸಂಬಂಧಪಟ್ಟ ನಿಯಂತ್ರಣ/ ಅನುಷ್ಠಾನಾಧಿಕಾರಿಗಳು ಖಾತರಿ ಪಡಿಸಿಕೊಳ್ಳಬೇಕು.
24. ಅನುಮೋದಿತ L1 ದರಕ್ಕಿಂತ ಹೆಚ್ಚಿನ ದರ ನೀಡುವಂತಿಲ್ಲ, ಆದರೆ ಕಡಿಮೆ ಬೆಲೆಗೆ ಸೂಕ್ತ ಗುಣಮಟ್ಟದ ಉತ್ಪನ್ನ ಪೂರೈಸಿದಲ್ಲಿ ಯಾವುದೇ ಅಭ್ಯಂತರವಿರುವುದಿಲ್ಲ.
25. ಎಂಪ್ಯಾನಲ್ ಸರಬರಾಜುದಾರರಿಗೆ ಫಲಾನುಭವಿ ವಂತಿಗೆಯನ್ನು ಸಲಕರಣೆ ಸಾಮಗ್ರಿ ಮತ್ತು ಸೋಂಕುನಿವಾರಕಗಳು ಸರಬರಾಜಾದ ಕೂಡಲೇ ಪಾವತಿಸಬೇಕು
26. ಸರ್ಕಾರದ ಸಹಾಯಧನದ ವಂತಿಗೆಯನ್ನು ಅನುದಾನ ಬಿಡುಗಡೆಯಾದ 15 ದಿನಗಳೊಳಗೆ ಸರಬರಾಜು ಸಂಸ್ಥೆಗೆ ಇ.ಸಿಎಸ್ ಅಥವಾ ಎನ್ಇಎಫ್ಟಿ (ECS or NEFT)ಮೂಲಕ ಪಾವತಿಸಲು ಕ್ರಮವಹಿಸುವುದು.
27. ಈ ಹಂತದಲ್ಲಿ ಗುಣಮಟ್ಟದ ಕುರಿತಾಗಿ ಸೂಕ್ತ ಪರೀಕ್ಷಾ ವರದಿಗಳನ್ನು ಪಡೆದು ಗುಣಮಟ್ಟ ಖಾತ್ರಿ ಪಡಿಸಿಕೊಳ್ಳಬೇಕು.
28. ಎಂಪ್ಯಾನಲ್‌ಮೆಂಟ್ ಪಟ್ಟಿಯಲ್ಲಿ ನಮೂದಿಸಿದ ಸಲಕರಣೆ ಸಾಮಗ್ರಿ ಮತ್ತು ಸೋಂಕುನಿವಾರಕಗಳ ದರಗಳು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ದರಕ್ಕಿಂತ ಯಾವುದೇ ಕಾರಣಕ್ಕೂ ಹೆಚ್ಚಿಗೆ ಇರಬಾರದು. ಇಂತಹ ಪ್ರಕರಣ ಕಂಡು ಬಂದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ನಿರ್ದೇಶನಾಲಯಕ್ಕೆ ವರದಿ ಮಾಡುವುದು.
29. ರೇಷ್ಮೆ ಬೆಳೆಗಾರರು ಅವಶ್ಯವಿರುವ ಸಲಕರಣೆ ಸಾಮಗ್ರಿಗಳನ್ನು ಮತ್ತು ಸೋಂಕು ನಿವಾರಕಗಳನ್ನು ಎಂಪ್ಯಾನಲ್ ಮಾಡಿರುವ ಸರಬರಾಜುದಾರರಿಂದ ನೇರವಾಗಿ ಪೂರ್ಣ ಮೊತ್ತ ಪಾವತಿಸಿ ಖರೀದಿಸಿದಲ್ಲಿ

L1ದರಕ್ಕೆ ಅನುಗುಣವಾಗಿ ವಿವಿಧ ಯೋಜನೆಗಳ ಮಾರ್ಗಸೂಚಿಗಳಿಗೆ ಅನುಗುಣವಾಗಿ ನಿಯಾಮನುಸಾರ ನೀಡಬಹುದಾದ ಸಹಾಯಧನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲು ಕ್ರಮವಹಿಸುವುದು.

30. ಅನ್ವಯಿಸುವ ಎಲ್ಲಾ ಕಾನೂನು ಬದ್ಧ ತೆರಿಗೆ ಇತ್ಯಾದಿಗಳನ್ನು ಕಟಾಯಿಸಲು ಕ್ರಮವಹಿಸುವುದು.

ಮೇಲಿನ ಅಂಶಗಳ ಜೊತೆಗೆ ಸಹಾಯಧನ ಮಂಜೂರು ಮಾಡುವ ಸಂಬಂಧ ನಿರ್ದೇಶನಾಲಯದಿಂದ ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿಗಳ ಅನ್ವಯ ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಉಲ್ಲೇಖ (1)ರ ಸರ್ಕಾರದ ಸುತ್ತೋಲೆ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ಈ ಕುರಿತು ಫಲಾನುಭವಿಗಳಿಗೆ ಸೂಕ್ತ ತಿಳುವಳಿಕೆ ಮತ್ತು ಮಾರ್ಗದರ್ಶನ ನೀಡಲು ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

2817

ರೇಷ್ಮೆ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಎಲ್ಲಾ ರೇಷ್ಮೆ ಉಪನಿರ್ದೇಶಕರುಗಳಿಗೆ
ಎಲ್ಲಾ ರೇಷ್ಮೆ ಜಂಟಿನಿರ್ದೇಶಕರುಗಳಿಗೆ